

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

Volume 35 : Issue 2 KARMUL/2021/79912 BENGALURU JULY-SEPTEMBER 2022 Price Rs.10/-



ಮತ್ಸ್ಯಾವತಾರ



ಗಣೇಶೋತ್ಸವ



ದುರ್ಗಾನಮಸ್ಕಾರ



ಪ್ರತಿಭಾ ಸ್ಪರ್ಧೆ



ಪ್ರತಿಭಾ ಮೇಳ

ಪರಿತ್ರಾಣಾಯ ಸಾಧೂನಾಮ್  
ವಿನಾಶಾಯ ಚ ದುಷ್ಕೃತಾಮ್।  
ಧರ್ಮ ಸಂಸ್ಥಾಪನಾರ್ಥಾಯ  
ಸಂಭವಾಮಿ ಯುಗೇ ಯುಗೇ॥



*With best compliments from*

# TEDMAG ENGINEERING & MANAGEMENT CONSULTANTS (P) LTD.

Swagat, 1209, 11th Cross
HSR Layout Sector I, Bangalore – 560 102
Tel.: +91 (0)80 22586129
Fax: +91 (0)80 22589134

**E-mail:**
Bangalore : tedmagemc@hotmail.com
sridhar_bhat@yahoo.com
Chennai : myram47@gmail.com
Mumbai : mindi1940@yahoo.com

- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

# ಆನಂದ ಬಳಗ (ರಿ)

ಹೋಟೆಲ್ ಅಜಂತಾ ಆವರಣ, 22 'ಎ', ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560 001

## ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಸೂಚನಾ ಪತ್ರ

ಆನಂದ ಬಳಗ (ರಿ) ಬೆಂಗಳೂರು ಇದರ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 13–11–2022ರ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸರಿಯಾಗಿ ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿರುವ ಅಜಂತಾ ಹೋಟೆಲಿನ ಸಭಾಂಗಣದಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಿ, ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ.

1. ಪ್ರಾರ್ಥನೆ
2. ಸಭೆಯ ಅಧಿಕೃತ ಚಾಲನೆ – ಅಧ್ಯಕ್ಷರಿಂದ
3. ಸಭೆಯ ಸೂಚನಾ ಪ್ರಕಟಣೆಯನ್ನು ಓದಿ
4. ಸ್ವಾಗತ ಭಾಷಣ
5. 2021–22ನೇ ಸಾಲಿನಲ್ಲಿ ಅಗಲಿದ ಬಳಗದ ಸದಸ್ಯರಿಗೆ ಶ್ರದ್ಧಾಂಜಲಿ.
6. 2020–21ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನಡವಳಿಕೆಯನ್ನು ಓದಿ ಪರಿಶೀಲಿಸಿ ದಾಖಲಿಸುವುದು ಮತ್ತು ಅಂಗೀಕರಿಸುವುದು.
7. 2021–22ನೇ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಓದಿ, ಪರಿಶೀಲಿಸಿ ದಾಖಲಿಸುವುದು ಮತ್ತು ಅಂಗೀಕರಿಸುವುದು.
8. 31 ಮಾರ್ಚ್ 2022ರಂದು ಮುಗಿದ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ, ಚರ್ಚೆ, ಪರಿಶೀಲನೆ ಮತ್ತು ಅಂಗೀಕಾರ.
9. 2022–23ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ.
10. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಬಗ್ಗೆ ಪ್ರಸ್ತಾವನೆ ಮತ್ತು ವಿಚಾರ ವಿನಿಮಯ
11. ಅಧ್ಯಕ್ಷರ ಮಾತು
12. ವಂದನಾರ್ಪಣೆ

ಸದಸ್ಯರು ಅಧಿಕ ಸಂಖ್ಯೆಯಲ್ಲಿ ಈ ಸಭೆಯಲ್ಲಿ ಹಾಜರಿರಬೇಕಾಗಿ ಕೋರಿಕೆ.

ಬೆಂಗಳೂರು
ದಿನಾಂಕ : 06.10.2022

**ಎ. ಸಂದೀಪ್ ರಾವ್**
ಕಾರ್ಯದರ್ಶಿ

---

**ವಿಶೇಷ ಸೂಚನೆಗಳು**

1. ಪ್ರಶ್ನೆಗಳನ್ನು ಕೇಳಬಯಸುವ ಸದಸ್ಯರು ಮಹಾಸಭೆಯ ಒಂದು ವಾರದ ಮುಂಚಿತವಾಗಿ ತಮ್ಮ ಪ್ರಶ್ನೆಗಳನ್ನು ಲಿಖಿತ ಮುಖೇನ ಆನಂದಬಳಗದ ಕಛೇರಿಗೆ ಕಳುಹಿಸತಕ್ಕದ್ದು. ಪ್ರಶ್ನೆ ಕೇಳುವವರು ಸಭೆಯಲ್ಲಿ ಖುದ್ದು ಹಾಜರಿರತಕ್ಕದ್ದು.
2. 2021–22ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಪ್ರತಿಯನ್ನು ಸದಸ್ಯರು ಬಳಗದ ಕಛೇರಿಯಿಂದ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ (ರಜಾ ದಿನಗಳನ್ನುಳಿದು ಇತರ ದಿನಗಳಲ್ಲಿ) ಪಡೆಯಬಹುದು.
3. ಮಹಾಸಭೆಯನ್ನು ಕೇಂದ್ರ/ರಾಜ್ಯ ಸರ್ಕಾರದ ಕೋವಿಡ್–19 ಮಾರ್ಗಸೂಚಿ ಪ್ರಕಾರ ನಡೆಸಬೇಕಾಗಿದ್ದು, ಭಾಗವಹಿಸುವ ಸದಸ್ಯರು ಈ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಕೋರಲಾಗಿದೆ.

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 35 ಸಂಚಿಕೆ 02

ಅಧ್ಯಕ್ಷರು :
**ಬಾಳೇಕುದ್ರು ರಾಮಚಂದ್ರ ಉಪಾಧ್ಯ**

ಕಾರ್ಯದರ್ಶಿ :
**ಎ. ಸಂದೀಪ್ ರಾವ್**

ಸಂಪಾದಕರು :
**ಡಿ. ಶರತ್ ಕುಮಾರ್ ಭಟ್**

ಸಂಪಾದಕ ಮಂಡಳಿ :
**ಎಸ್. ಹರಿದಾಸ ಉಪಾಧ್ಯ**
**ಎಂ. ಸತ್ಯನಾರಾಯಣ ಭಟ್**

ವರದಿ ಲೇಖನ ಸಹಕಾರ :
**ಕೆ.ಎನ್.ಅಡಿಗ**
**ಟಿ.ಎಸ್.ನಾಗರಾಜ ಉಪಾಧ್ಯಾಯ**
**ಶ್ರೀಮತಿ ಶೋಭಾ ರಾಧಾಕೃಷ್ಣ**
**ಶ್ರೀಮತಿ ಸುಜಾತಾ ರಮೇಶ್**


ಜಾಹೀರಾತು ಸಮನ್ವಯ :
**ಎಂ. ಕೃಷ್ಣಪ್ರಸಾದ್**
**ಗೋಪಾಲಕೃಷ್ಣ ಕುಂಜತ್ತಾಯ**
**ವೈ.ಜಯಂತ ರಾವ್**

ಛಾಯಾಗ್ರಹಣ:
**ಕೆ. ಬಾಲಕೃಷ್ಣ ಉಪಾಧ್ಯಾಯ**
**ಮಟ್ಟಿ ರಾಮಚಂದ್ರ ರಾವ್**

ಪ್ರಸರಣ ಸಹಕಾರ:
**ರಂಜಿತ್ ಎಡಪಾಡಿತ್ತಾಯ**

ವಿಳಾಸ :
**ಆನಂದ ಬಳಗ**
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

Website:
www.anandabalaga.org



# ಅಧ್ಯಕ್ಷರ ನುಡಿ....

ನಮ್ಮ ಹೆಮ್ಮೆಯ ಹಿಂದೂಸ್ಥಾನವು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ಸಂಭ್ರಮಿಸಿದೆ. ನಮ್ಮ ಅಭಿಮಾನಧನರಾದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಕರೆಯಂತೆ ದೇಶದಾದ್ಯಂತವೂ ಮೂರುದಿನಗಳ ಕಾಲ ರಾಷ್ಟ್ರಧ್ವಜವನ್ನು ಬಾನೆತ್ತರಕ್ಕೆ ಹಾರಿಸಲಾಗಿದೆ. ಪ್ರಧಾನಿಗಳ ನೇತೃತ್ವದಲ್ಲಿ ದೇಶವು ಜಗತ್ತಿನಾದ್ಯಂತ ಮಹತ್ತರ ಸ್ಥಾನಮಾನಗಳನ್ನು ಹೊಂದುವ ನಿಟ್ಟಿನಲ್ಲಿ ಮುಂದುವರಿಯುತ್ತಿದ್ದು, ಈ ಮುನ್ನಡೆಯು ನಿರಂತರವಾಗಿರಲಿ ಎಂದು ಆಶಿಸೋಣ.

ಈ ವರ್ಷದ ಮಳೆ ಬಹಳ ವಿಚಿತ್ರವಾಗಿ ಸುರಿದಿದೆ. ಬೆಂಗಳೂರನ್ನೂ ಬಹುವಾಗಿ ಬಾಧಿಸಿರುವ ಈ ಬಾರಿಯ ಮಳೆಯ ಪ್ರಕೋಪ ದೇಶಾದ್ಯಂತವೂ ದುಷ್ಪರಿಣಾಮಗಳನ್ನು ಬೀರಿದೆ. ನದಿಗಳು, ಹೊಳೆಗಳು, ರಾಜಕಾಲುವೆಗಳು, ರಸ್ತೆಗಳೆಲ್ಲ ತುಂಬಿ ಮನೆಗಳು, ಕಟ್ಟಡಗಳ ಒಳಗೆಲ್ಲ ನುಗ್ಗಿದ್ದು, ಸಾಫ್ಟ್‌ವೇರ್ ಕಂಪೆನಿಗಳು, ಆಸ್ಪತ್ರೆಗಳು ತೊಂದರೆಗೊಳಗಾದದ್ದು ಬೆಂಗಳೂರಿನ ಮತ್ತು ರಾಜ್ಯದ ವಿವಿಧೆಡೆಗಳಿಂದ ಬಂದ ಸುದ್ದಿಗಳು. ವರುಣನು ಶಾಂತವಾಗಲಿ. ಕೃಷಿ ಸಮೃದ್ಧಿಯಾಗಲಿ, ದೇಶವು ಸುಭಿಕ್ಷವಾಗಲಿ ಎಂದು ಭಗವಂತನಲ್ಲಿ ಪ್ರಾರ್ಥನೆ.

ಆನಂದ ಬಳಗದ ವತಿಯಿಂದ ಪ್ರತಿವರ್ಷದಂತೆ ವಿದ್ಯಾಪೀಠದಲ್ಲಿ ಗೋಕುಲಾಷ್ಟಮಿ–ವಿಟ್ಲಪಿಂಡಿಯಂದು, ರಾಘವೇಂದ್ರ ಸ್ವಾಮಿಗಳ ಆರಾಧನೆಯಂದು ಸೇವಾಕೈಂಕರ್ಯ ನಡೆದಿದೆ. ಸದಸ್ಯಬಂಧುಗಳಿಗಾಗಿ ಬಳಗದ ವಿವಿಧ ವಿಭಾಗಗಳ ವತಿಯಿಂದ ಪ್ರತಿವರ್ಷ ಏರ್ಪಡಿಸುವ ದೀಪ ದುರ್ಗಾನಮಸ್ಕಾರ ಪೂಜೆ, ಗಣೇಶೋತ್ಸವ, ಮಕ್ಕಳ ಪ್ರತಿಭಾ ಸ್ಪರ್ಧೆ, ಪ್ರತಿಭಾ ಮೇಳ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳೆಲ್ಲ ಸಾಂಗವಾಗಿ ಯಶಸ್ವಿಯಾಗಿ ನಡೆದಿವೆ. ಈ ಯಶಸ್ಸಿನಲ್ಲಿ ಬಳಗದ ಪದಾಧಿಕಾರಿಗಳ, ವಿವಿಧ ವಿಭಾಗಗಳ ಸಂಚಾಲಕರ ಮತ್ತು ಸದಸ್ಯರ ಸಹಕಾರ ಪಾಲ್ಗೊಳ್ಳುವಿಕೆಗಳ ಪಾತ್ರ ಉಲ್ಲೇಖನೀಯ.

ಮುಂದಿನ ತಿಂಗಳು ಕರ್ನಾಟಕಕ್ಕೆ ನಾಡಹಬ್ಬದ ತಿಂಗಳು. ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವ. ಇದರ ಆಚೀಚೆಗಿನ ದಿನಗಳಲ್ಲಿ ದೀಪಾವಳಿ ಮತ್ತು ತುಳಸೀಪೂಜೆಗಳು ಸಂಪನ್ನಗೊಳ್ಳಲಿವೆ. ಬಳಗದ ಸದಸ್ಯರಿಗೆ ಬೆಳಕಿನ ಹಬ್ಬ ಮತ್ತು ನಾಡುನುಡಿ ಹಬ್ಬದ ಶುಭಹಾರೈಕೆಗಳು.

ನವೆಂಬರ್ ತಿಂಗಳ 13ನೇ ತಾರೀಕಿನಂದು ಆನಂದ ಬಳಗದ ವಾರ್ಷಿಕ ಸರ್ವಸದಸ್ಯರ ಸಭೆಯು ಎಂ.ಜಿ.ರಸ್ತೆಯ ಅಜಂತಾ ಹೋಟೆಲಿನ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಸರ್ವಸದಸ್ಯರೂ ಸಕ್ರಿಯರಾಗಿ ಭಾಗವಹಿಸಬೇಕೆಂದು ಕೋರುತ್ತೇನೆ.

**– ಬಾಳೆಕುದ್ರು ರಾಮಚಂದ್ರ ಉಪಾಧ್ಯ**

## Executive Committee Members 2022-2024

| Name | Contact Numbers |
|---|---|
| ***President*** | |
| B. Ramachandra Upadhya | 99024 00072 |
| ***Vice Presidents*** | |
| S. Haridas upadhya | 94480 01892 |
| S.N. Sharathchandra | 98860 40271 |
| ***Secretary*** | |
| A. Sandeep Rao | 98450 98150 |
| ***Treasurer*** | |
| M.K. Gurumurthy | 98440 22692 |
| ***Convener - Cultural wing*** | |
| Smt. Shobha Radhakrishna | 98447 25547 |
| ***Convener - Youth wing*** | |
| Prakash K. Bhat | 98455 06777 |
| ***Convener - Religious wing*** | |
| T.S. Nagaraja Upadhyaya | 93412 26763 |
| ***Convener - Edu. Assistance Programme*** | |
| B.S. Balachandra Tolpadi | 94481 34268 |
| ***Convener - Membership Dev. Wing*** | |
| M. Krishnaprasad | 98450 18183 |
| ***Convener - Public Relation Wing*** | |
| Dr. K.N. Adiga Adoor | 96862 04659 |
| ***Covener - Comunity Services*** | |
| Y. Jayantha Rao | 94482 74519 |
| ***Convener - Media & Communications*** | |
| M. Dinesh Rao | 99456 88955 |
| ***Editor - BHRUGUVANI*** | |
| D. Sharath Kumar Bhat | 9448342111 |
| ***Members:*** | |
| Smt. Geetha V. Rao | 98808 99997 |
| P.C. Rao | 98444 46309 |
| P.N.V. Murthy | 9480305426 |
| Mohan Rao M. | 98453 79956 |
| Gopalkrishna K. | 9980128059 |
| Ramesh Bhat H. | 98450 24708 |
| ***Past Presidents/Permanent Invitees*** | |
| Smt. Vijayalakshmi Bhat | 98441 52107 |
| P.S.Bagilthaya | 98440 83582 |
| U.A.P. Ballal | 99860 28602 |
| K. Vasudeva Rao | 98450 57111 |
| S.T.R. Madi | 99029 77948 |
| ***Special Invitees*** | |
| U.V. Krishnamurthy | 98440 24136 |
| Y. Shreepathi Bhat | 65626972 |
| Smt. Geetha P.R. Rao | 99459 38411 |
| Smt. Sudha M. Rao | 99011 27738 |
| Radhakrishna Y. | 98440 58851 |
| Sathyanarayana Bhat M. | 99458 02607 |
| Dr. Smt. Veena Sharath | 99860 80271 |
| Smt. Madhavi Ballal | 99860 39107 |
| Gururaj Pejavar | 98440 09293 |
| Madhava Upadhya | 94480 41424 |
| Rajesh Rao P. | 9886938802 |
| Smt. Sowmya K.V. | 9886200062 |
| Matti Ramachandra Rao | 9448670741 |

## ಒಳಪುಟಗಳಲ್ಲಿ.....


ಮಹಾಸಭೆಯ ಸೂಚನಾ ಪತ್ರ ... 1

ಅಧ್ಯಕ್ಷರ ನುಡಿ ... 3

ಫಲಿಮಾರು ಶ್ರೀಗಳ ಚಾತುರ್ಮಾಸ್ಯ ... 4

ಗಣೇಶೋತ್ಸವ ... 5

ಮಕ್ಕಳ ಪ್ರತಿಭಾ ಸ್ಪರ್ಧೆ ... 6

Personal Brand Building ... 8

ದೀಪದುರ್ಗಾ ನಮಸ್ಕಾರ ಪೂಜೆ ... 9

ಮಕ್ಕಳ ಪ್ರತಿಭಾ ಮೇಳ ... 10

ದೇವರಿಗೆ ತಲುಪಿದ್ದು ... 12

ಜ್ಞಾನಮುದ್ರೆ ಮತ್ತು ಚಿನ್ಮುದ್ರೆ ... 13

ಪುರಾಣ ಪ್ರಪಂಚ ... 14

ಸಂಪಾದಕೀಯ.... ... 15

Key To Success & Safety !! ... 16

Felicitation ... 17

Badminton ... 18

Audit Report - Balance ... 19


ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.

## ಶುಭಾಶಯ





ಭೃಗುವಾಣಿಯ ಸಮಸ್ತ ಓದುಗ ಬಂಧುಗಳಿಗೆ,
ಜಾಹೀರಾತುದಾರರಿಗೆ ಹಾಗೂ ಆನಂದ ಬಳಗದ
ಎಲ್ಲಾ ಸದಸ್ಯ ಬಾಂಧವರಿಗೆ

**ದೀಪಾವಳಿ ಹಬ್ಬದ ಮತ್ತು**
**ಕನ್ನಡ ರಾಜ್ಯೋತ್ಸವ** ಶುಭಾಶಯಗಳು

**– ಸಂಪಾದಕ ಸಮಿತಿ**

# ಫಲಿಮಾರು ಶ್ರೀಗಳ ಚಾತುರ್ಮಾಸ್ಯ

ಫಲಿಮಾರು ಮಠಾಧೀಶರಾದ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರ ಚಾತುರ್ಮಾಸ್ಯ ದೀಕ್ಷಾ ಸ್ವಾಗತ ಸಮಾರಂಭವು 23–7–2022ರಂದು ಸಂಜೆ ಮಲ್ಲೇಶ್ವರದ ಫಲಿಮಾರು ಮಠದ ಶಾಖೆಯಲ್ಲಿ ನಡೆಯಿತು. ಸಭಾ ಕಾರ್ಯಕ್ರಮಕ್ಕಿಂತ ಮುನ್ನ ಕಾಡುಮಲ್ಲೇಶ್ವರ ದೇವಸ್ಥಾನದಿಂದ ಮಠದ ವರೆಗೆ ಶ್ರೀಗಳನ್ನು ಭವ್ಯ ಮೆರವಣಿಗೆಯಲ್ಲಿ ಕರೆತರಲಾಯಿತು.

ಮಾಜಿ ಮುಖ್ಯಮಂತ್ರಿ ಶ್ರೀ ಡಿ.ವಿ.ಸದಾನಂದಗೌಡ, ವಿದ್ವಾನ್ ಆನಂದತೀರ್ಥ ನಾಗಸಂಪಿಗೆ, ನಿವೃತ್ತ ಪೋಲೀಸ್ ಅಧಿಕಾರಿ ಶ್ರೀ ಬಿ.ಕೆ.ಶಿವರಾಮ್ ಮತ್ತು ಆನಂದ ಬಳಗ, ದಕ್ಷಿಣ ಕನ್ನಡಿಗರ ಸಂಘಗಳ ಅಧ್ಯಕ್ಷ ಶ್ರೀ ಬಾಳೆಕುದ್ರು ರಾಮಚಂದ್ರ ಉಪಾಧ್ಯರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶ್ರೀಗಳು ಸನ್ಯಾಸಧರ್ಮ ಪಾಲನೆಯೊಂದಿಗೆ ಸಮಾಜ ಸೇವಾ ಕಾರ್ಯದಲ್ಲಿಯೂ ಕ್ರಿಯಾಶೀಲವಾಗಿ ತೊಡಗಿಸಿ ಕೊಂಡಿರುವುದನ್ನು ಸದಾನಂದಗೌಡರು ಶ್ಲಾಘಿಸಿದರು.

ಚಾತುರ್ಮಾಸ್ಯದ ವೈಶಿಷ್ಟ್ಯವನ್ನು ವಿವರಿಸಿದ ವಿದ್ವಾನ್ ಶ್ರೀ ಆನಂದತೀರ್ಥ ನಾಗಸಂಪಿಗೆಯವರು ವ್ರತನಿಷ್ಠರಾದ ಶ್ರೀಗಳ ಅನುಗ್ರಹಾಶೀರ್ವಾದವು ಸಮಾಜಕ್ಕೆ ಶ್ರೇಯಸ್ಕರವೆಂದು ಹೇಳಿದರು.

ಮಲ್ಲೇಶ್ವರದ ಪರಿಸರ ಮತ್ತು ಕಾಡುಮಲ್ಲೇಶ್ವರ ದೇವಸ್ಥಾನದೊಂದಿಗೆ ಶ್ರೀಗಳ ಅವಿನಾಭಾವ ಸಂಬಂಧಗಳ ಬಗ್ಗೆ ಶ್ರೀ ಬಿ.ಕೆ.ಶಿವರಾಮ್ ಸೋದಾಹರಣವಾಗಿ ವಿವರಿಸಿದರು.

ಆನಂದ ಬಳಗವು ಶ್ರೀಮಠದೊಂದಿಗೆ ಸಕಲ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಹಿಂದಿನಿಂದಲೂ ಕೈಗೂಡಿಸುತ್ತಿದೆ ಎಂದು ತಿಳಿಸಿದ ಶ್ರೀ ರಾಮಚಂದ್ರ ಉಪಾಧ್ಯರು, ಮಲ್ಲೇಶ್ವರ ಮಠ ನಿರ್ಮಾಣ ಸಂದರ್ಭದಲ್ಲಿಯೂ ಬಳಗದಿಂದ ಗಣನೀಯ ಕೊಡುಗೆ ಸಂದಾಯವಾಗಿದೆ. ಇದೀಗ ಬಳಗದ ಸದಸ್ಯರೋರ್ವರು ಬಳಗದ ಮೂಲಕ ಶ್ರೀ ಮಠಕ್ಕೆ ಸೋಲಾರ್ ವಿದ್ಯುತ್ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ ಎಂದು ತಿಳಿಸಿದರು.

ಶ್ರೀ ಮೋಹನ ಆಚಾರ್ಯರು ಕಾರ್ಯಕ್ರಮ ನಿರೂಪಿಸಿದರು. ಶ್ರೀ ಸುದರ್ಶನ ಆಚಾರ್ಯರು ಸ್ವಾಗತಿಸಿದರು. ತೌಳವ–ಮಾಧ್ವ ಒಕ್ಕೂಟದ ಸದಸ್ಯರು ಮೆರವಣಿಗೆಯಲ್ಲಿ ಪಟ್ಟದ ದೇವರನ್ನು ಪಲ್ಲಕ್ಕಿಯಲ್ಲಿ ಹೊತ್ತುತರಲು ಕೈಗೂಡಿಸಿದರು.



**ಭೀಮಧಾಮ**

ಹರಿಯಾಣ ರಾಜ್ಯದ ಕುರುಕ್ಷೇತ್ರದಲ್ಲಿ ಮಹಾಭಾರತ ಯುದ್ಧದ ಸಂದರ್ಭದಲ್ಲಿ ಅರ್ಜುನನಿಗೆ ಶ್ರೀಕೃಷ್ಣನು ಭಗವದ್ಗೀತೆಯನ್ನು ಬೋಧಿಸಿದ ಸ್ಥಳದ ಸಮೀಪದಲ್ಲೇ ಭೀಮಧಾಮ ಎಂಬ ಪುಣ್ಯಕ್ಷೇತ್ರ ನಿರ್ಮಿಸಲು ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು ಸಂಕಲ್ಪಿಸಿದ್ದಾರೆ.





ನೂರು ಮಂದಿ ಕೌರವರನ್ನು ಏಕಾಂಗಿಯಾಗಿ ಸಂಹರಿಸಿದ ಭೀಮದೇವರ 32 ಅಡಿ ಎತ್ತರದ ಏಕಶಿಲಾ ವಿಗ್ರಹವನ್ನು ಪ್ರತಿಷ್ಠಾಪಿಸುವ ಯೋಜನೆ ಇದಾಗಿದ್ದು, ಎರಡು ಎಕರೆ ಸ್ಥಳದಲ್ಲಿ ನಿರ್ಮಾಣ ಕಾಮಗಾರಿ ಪ್ರಾರಂಭಗೊಂಡಿವೆ ಎಂದು ಶ್ರೀಗಳು ಆಶೀರ್ವಚನದ ಸಂದರ್ಭದಲ್ಲಿ ತಿಳಿಸಿದರು. ಸೇಲಂನಲ್ಲಿ ಬೃಹದಾಕಾರದ ಶಿಲೆಯನ್ನು ಗುರುತಿಸಲಾಗಿದ್ದು ಕೆಲಸ ಪ್ರಾರಂಭವಾಗಿದೆ ಎಂದು ಶ್ರೀಗಳು ತಿಳಿಸಿದರು. ಈ ಸ್ಥಳದಲ್ಲಿ ಗುರುಕುಲ, ಆಲಯ, ಯಾಗಶಾಲೆ, ಗೋಶಾಲೆ, ಪ್ರವಚನ ಮಂದಿರ, ಯಾತ್ರಿನಿವಾಸಗಳ ನಿರ್ಮಾಣಕ್ಕಾಗಿ ಹತ್ತು ಕೋಟಿ ರುಪಾಯಿಗಳ ಯೋಜನೆಯ ರೂಪುರೇಷೆ ಸಿದ್ಧಪಡಿಸಲಾಗಿದೆ, ನೂರಾರು ಮಂದಿಗೆ ಉದ್ಯೋಗ ಒದಗಿಸುವ ಈ ಧಾರ್ಮಿಕಕಾರ್ಯಕ್ಕೆ ಭಕ್ತಾದಿಗಳು ದೇಣಿಗೆ ನೀಡುವ ಮೂಲಕ ಪುಣ್ಯಭಾಜನರಾಗಬೇಕು ಎಂದು ಶ್ರೀಗಳು ಕರೆ ನೀಡಿದರು.

# ಗಣೇಶೋತ್ಸವ

ಆನಂದ ಬಳಗದ ಯುವ ವಿಭಾಗದ ವತಿಯಿಂದ 4–9–2022, **ಭಾನುವಾರದಂದು ಬನ್ನೇರುಘಟ್ಟದ ಆನಂದ ಸಭಾಗೃಹದಲ್ಲಿ ಗಣೇಶೋತ್ಸವವನ್ನು** ವಿಜೃಂಭಣೆಯಿಂದ ಆದರಿಸಲಾಯಿತು.

ಬಳಗದ ಸದಸ್ಯರಿಂದ ಆಕರ್ಷಕ ಹೂವಿನ ಅಲಂಕಾರ, ಕಲಾತ್ಮಕ ರಂಗೋಲಿ, ಮನಸೆಳೆಯುವಂತಿತ್ತು. ಬೆಳಿಗ್ಗೆ 9 ಗಂಟೆಗೆ ದೇವತಾ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಧಾರ್ಮಿಕ ಕಾರ್ಯಕ್ರಮದ ನೇತೃತ್ವವನ್ನು ಪುರೋಹಿತರಾದ ವಿದ್ವಾನ್ ಶ್ರೀ ವಿಷ್ಣುಮೂರ್ತಿ ಸರಳಾಯರು ವಹಿಸಿದ್ದರು. ಅಷ್ಟದ್ರವ್ಯ ಗಣಪತಿಹೋಮದ ಮಂಗಳಾರತಿಯು 11.30ಕ್ಕೆ ನಡೆದು ಪೂರ್ಣಾಹುತಿಯನ್ನು ಸಮರ್ಪಿಸಲಾಯಿತು. ವಿಷ್ಣುಸಹಸ್ರನಾಮ ಮತ್ತು ದೇವರನಾಮಗಳನ್ನು ಬಳಗದ ಸದಸ್ಯರು ಪಠಿಸಿದರು.

ಮೃತ್ತಿಕಾ ಗಣಪತಿಗೆ ಷೋಡಶೋಪಚಾರ ಪೂಜೆ, ನೈವೇದ್ಯ ಸಮರ್ಪಿಸಿ 12.30ಕ್ಕೆ ಮಹಾಮಂಗಳಾರತಿಯನ್ನು ಮಾಡಲಾಯಿತು. ತೀರ್ಥಪ್ರಸಾದ ವಿನಿಯೋಗದ ಬಳಿಕ ಪಾಕಶಾಸ್ತ್ರಿಗಳಾದ ಶ್ರೀ ವೆಂಕಟರಾಜ ಭಟ್ಟರಿಂದ ಷಡ್ರಸೋಪೇತ ಭೋಜನ ಏರ್ಪಡಿಸಲಾಗಿತ್ತು. ಅಪರಾಹ್ನ 2.30ಕ್ಕೆ ಚೆಂಡೆಮೇಳ ಮತ್ತು ನೃತ್ಯದೊಂದಿಗೆ ವೈಭವದ ಮೆರವಣಿಗೆಯಲ್ಲಿ ಗಣೇಶನ ಮೃತ್ತಿಕಾ ವಿಗ್ರಹವನ್ನು ಒಯ್ದು, ಜಲಸ್ಥಂಭನ ಮಾಡಿ ನಮ್ಮನ್ನು ಹರಸಲು ಮತ್ತೆ ಮತ್ತೆ ಬಾ ಗಣಪ ಎಂದು ಪ್ರಾರ್ಥಿಸಿ ಧನ್ಯರಾದರು.





ಬಳಗದ ಅಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯರ ಮಾರ್ಗದರ್ಶನ, ಯುವ ವಿಭಾಗದ ಸಂಚಾಲಕರಾದ ಶ್ರೀ ಪ್ರಕಾಶ ಭಟ್ ಅವರ ನೇತೃತ್ವದಲ್ಲಿ ಇನ್ನಿತರ ಬಳಗದ ವಿಭಾಗಗಳ ಪದಾಧಿಕಾರಿಗಳು ಮತ್ತು ನೂರಾರು ಸದಸ್ಯರುಗಳ ಸಂಪೂರ್ಣ ಸಹಕಾರ ಮತ್ತು ಪಾಲ್ಗೊಳ್ಳುವಿಕೆಯೊಂದಿಗೆ ಗಣೇಶೋತ್ಸವ ಸಂಪನ್ನಗೊಂಡಿತು.



# ಮಕ್ಕಳ ಪ್ರತಿಭಾ ಸ್ಪರ್ಧೆ



ತಾ.7.8.2022ರಂದು ಬೆಳಿಗ್ಗೆಯಿಂದ ಸಂಜೆಯ ವರೆಗೂ ಬೆಂಗಳೂರಿನ ಹೊಂಬೇಗೌಡನಗರದ ಸಿದ್ದಯ್ಯ ರಸ್ತೆಯಲ್ಲಿರುವ ಪೂರ್ಣಿಮಾ ರೀಜೆನ್ಸಿಯ ಸಂಕರ್ಷಣ ಸಭಾಂಗಣದಲ್ಲಿ ನೂರಾರು ಮಕ್ಕಳ ಕಲರವ.

ಅನಂದ ಬಳಗದ ಸಾಂಸ್ಕೃತಿಕ ವಿಭಾಗದ ವತಿಯಿಂದ ಏರ್ಪಡಿಸಿದ್ದ ಮಕ್ಕಳ ಪ್ರತಿಭಾ ಸ್ಪರ್ಧೆಯಲ್ಲಿ ಭಾಗವಹಿಸಲು ಮತ್ತು ಸ್ಪರ್ಧೆಯ ವೈಶಿಷ್ಟ್ಯವನ್ನು ಆಸ್ವಾದಿಸಲು ಸೇರಿದ್ದ ಬಳಗದ ಸದಸ್ಯರ ಮಕ್ಕಳು ಮತ್ತು ಅವರ ಕುಟುಂಬಿಕರಾದಿಯಾಗಿ ಸೇರಿದವರಿಂದ ಸಭಾಂಗಣ ತುಂಬಿತ್ತು. ದೇವರನಾಮ, ಸಂಸ್ಕೃತ ಶ್ಲೋಕಗಳು, ಭಕ್ತಿಗೀತೆ, ಸಂಗೀತವಾದ್ಯ ವಾದನ, ಚಿತ್ರಕಲೆ, ಆಶುಭಾಷಣ, ಭಾವಗೀತೆ, ಚಿತ್ರಗೀತೆ, ರಸಪ್ರಶ್ನೆ, ಛದ್ಮವೇಷ ಹೀಗೆ ನಡೆದ ವೈವಿಧ್ಯಮಯ ಸ್ಪಧೆಗಳಲ್ಲಿ 70ಕ್ಕೂ ಹೆಚ್ಚು ಮಕ್ಕಳು ಪೈಪೋಟಿಯಿಂದೆಂಬಂತೆ ಭಾಗವಹಿಸಿದ್ದರು.

ಪೂರ್ಣಿಮಾ ರೀಜೆನ್ಸಿಯ ಮಾಲೀಕರೂ, ಬಳಗದ ಅಧ್ಯಕ್ಷರಾದ ಶ್ರೀ ಬಾಳೆಕುದ್ರು ರಾಮಚಂದ್ರ ಉಪಾಧ್ಯರು ತಮ್ಮ ಸಭಾಂಗಣವನ್ನು ಕಾರ್ಯಕ್ರಮಕ್ಕಾಗಿ ಸಭಾಂಗಣವನ್ನು ಉಚಿತವಾಗಿ ಒದಗಿಸಿದ್ದು, ಇಡೀ ದಿನದ ಊಟೋಪಚಾರಗಳ ವ್ಯವಸ್ಥೆಯನ್ನು ಪ್ರಾಯೋಜಿಸಿದ್ದರು.

# ರಾಷ್ಟ್ರಧ್ವಜ ಹಸ್ತಾಂತರ



75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕೇಂದ್ರ ಸರಕಾರದ ನಿರ್ದೇಶನದಂತೆ ಮೂರುದಿನಗಳ ಕಾಲ ರಾಷ್ಟ್ರ ಧ್ವಜಾರೋಹಣ ಮಾಡುವುದಕ್ಕಾಗಿ ಆನಂದ ಬಳಗದ ವತಿಯಿಂದ ತ್ರಿವರ್ಣ ಧ್ವಜವನ್ನು ಆನಂದ ಬಳಗದ ಅಧ್ಯಕ್ಷ ಶ್ರೀ ಬಾ.ರಾಮಚಂದ್ರ ಉಪಾಧ್ಯರು ಬಳಗದ ಮಾಜಿ ಅಧ್ಯಕ್ಷರಾದ ಶ್ರೀ ಪಿ.ಎಸ್.ಬಾಗಿಲ್ತಾಯರಿಗೆ ಹಸ್ತಾಂತರಿಸಿದರು.

# ದೇವರನ್ನು ಹೊತ್ತ ಧನ್ಯತೆ



**ಶ್ರೀ ಗುರುರಾಯರ ಆರಾಧನೆಯ ಅಂಗವಾಗಿ ವಿದ್ಯಾಪೀಠದಲ್ಲಿ ನಡೆದ ವಿಟ್ಲಪಿಂಡಿ ಸಂದರ್ಭದಲ್ಲಿ ದೇವರನ್ನು ಮೆರವಣಿಗೆಯಲ್ಲಿ ತರುವ ಅವಕಾಶವು ಶ್ರೀ ವೈ. ಜಯಂತ ರಾಯರಿಗೆ ಪ್ರಾಪ್ತವಾಯಿತು.**

# ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ ಅಭಿನಂದನೆ



ಧರ್ಮ, ಶಿಕ್ಷಣ, ಆರೋಗ್ಯ, ಅನ್ನ ದಾಸೋಹ, ಗ್ರಾಮಾಭಿವೃದ್ಧಿ, ಕಲೆ, ಸಂಸ್ಕೃತಿಯ ಪೋಷಣೆ ಇತ್ಯಾದಿ ಸಾಮಾಜಿಕ ಪುರೋಭಿವೃದ್ಧಿಯ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿರುವ

**ಧರ್ಮಸ್ಥಳದ ಧರ್ಮಾಧಿಕಾರಿ**
**ಪದ್ಮವಿಭೂಷಣ ರಾಜರ್ಷಿ**
**ಡಾ.ಡಿ.ವಿರೇಂದ್ರ ಹೆಗ್ಗಡೆಯವರು**
**ರಾಜ್ಯಸಭಾ ಸದಸ್ಯರಾಗಿ**

ನಿಯುಕ್ತರಾಗಿರುವುದಕ್ಕೆ ಆನಂದ ಬಳಗವು ಅಭಿನಂದನೆಗಳನ್ನು ಸಲ್ಲಿಸುತ್ತದೆ.

## ಸನ್ಮಾನ



ರಾಜ್ಯ ವಿಪ್ರ ಫೋಟೋಗ್ರಾಫರ್ ಮತ್ತು ವಿಡಿಯೋಗ್ರಾಫರ್‌ಗಳ ಸಂಘದ ವತಿಯಿಂದ ಹಿರಿಯ ಛಾಯಾಗ್ರಾಹಕ ಸಾಧಕರ ಪ್ರಶಸ್ತಿಯನ್ನು ಶ್ರೀ ಕಲಾವಿದ ಚಿತ್ರಕಲಾ ಶಿಕ್ಷಕ ಶ್ರೀ ಮಟ್ಟಿ ರಾಮಚಂದ್ರ ರಾಯರಿಗೆ ನೀಡಿ ಸನ್ಮಾನಿಸಲಾಯಿತು. ನಾಡೋಜ ಡಾ.ಮಹೇಶ್ ಜೋಷಿ, ವಿದ್ವಾನ್ ಅರಳುಮಲ್ಲಿಗೆ ಪಾರ್ಥಸಾರಥಿ, ಗರುಡ ಫೌಂಡೇಶನ್ ಅಧ್ಯಕ್ಷ ಶ್ರೀಮತಿ ಮೇಧಿನಿ ಗರುಡಾಚಾರ್ ಹಾಗೂ ಹಿರಿಯ ಸಾಧಕರು ಮತ್ತು ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಶುಭವಿವಾಹ



ಆನಂದ ಬಳಗದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಪಿ.ಎನ್.ವಿಷ್ಣುಮೂರ್ತಿ ಕುದ್ದಣ್ಣಾಯ ಮತ್ತು ಶ್ರೀಮತಿ ವಂದನಾ ದಂಪತಿಗಳ ಸುಪುತ್ರ ಚಿ.ವಿನ್ಯಾಸ ಅವರ ವಿವಾಹವು ನೆಟ್ಟಣಿಗೆ ಹೊಸಮನೆ ಗ್ರಾಮದ ಶ್ರೀಮತಿ ವಿನುತಾ ಮತ್ತು ಶ್ರೀ ಶ್ರೀಧರ ಕೇಕುಣ್ಣಾಯ ದಂಪತಿಗಳ ಸುಪುತ್ರಿ ಚಿ.ಸೌ.ಕಾವ್ಯ ಅವರೊಂದಿಗೆ 29.8.2022ರಂದು ಪುತ್ತೂರಿನ ಈಶ್ವರಮಂಗಲದ ಹನುಮಗಿರಿಯ ವೈದೇಹಿ ಸಭಾಭವನದಲ್ಲಿ ನಡೆಯಿತು. ನೂತನ ವಧೂವರರಿಗೆ ಶುಭಾಶಯಗಳು.

# Corporate & Personal Brand Building



M. KRISHNA PRASAD

When you see a brand " IPHONE", HDFC, COLGATE, COKE, MTR etc. it creates confidence, trust in our minds and hearts. Similarly when you hear the name Narayana Murthy, Tata, Mukesh Ambani etc it raises trust, respect & expertise. It is imperative to mention every corporate or individual should aspire to build a powerful brand.

The Brand helps the corporate to command a premium for its product and raise the prices with ease when cost increases. For an individual brand helps in enhancing the value for his actions and advice. A reputed mobile which costs $ 600 to manufacture is sold at $ 1400 which is due to the powerful brand it could build as a "high technology state of the art mobile phone supplier". For an individual brand image helps in accepting his words and acts.

Now imagine that we are on a tour and in a remote town in china, we may not be able to get the food palatable to us, suddenly you see a outlet with name as SUBWAY, Mc DONALD you feel relaxed, you feel you can get food acceptable to you, the veg burger available in subway will be similar to what you get in subway Bengaluru. When you are thirsty in a Chinese town during a tour and you see an outlet selling coke, you feel confident enough to have it. This is the trust a brand creates in the mind of a consumer. MTR has created a brand for its eatery, the dosa you taste in MTR is of high quality and is repeated every day without even a % drop in quality, that's why you vouch for getting a good dosa in MTR.

Companies with high brand visibility have created a niche for its quality consistently and customers are sure of getting high quality products from that company.

**What is a brand?**

Brand creates visibility, awareness, trust and credibility for a product in the mind and heart of the customer.

Branding is a process through which a company creates visibility & unique position in the market and leverages it to attract high value customers, high value business, and high profitability.

**How to build a strong brand?**

Create a company logo and tagline mentioning what is your motto.

Create your website, LinkedIn page and Instagram with prominent display of logo and Tagline. Display the awards, felicitations and appreciatory letters received in online and offline media. Mention the list of associations where your company is a member.Have your own USP, like delivery within 30 minutes, technical support provided etc. Get your company, product and services endorsed by leaders in the Industry.

Advertise company name and product in newspaper, industry journals, and exhibitions. Sponsor programs for school competitions, community services, and social gatherings.

**Advantages of a strong Brand:**

A strong brand is always a crowd puller, it gives price advantage over competitors.

Strong brands are able to increase price when raw material cost increases, whereas an unbranded company may not be able to increase price due to the fear of business loss.

Brands help companies to produce and sell new products, Brand gives it instant acceptability in the market.


Conclusion: If you want to enhance the sales of your company, get better pricing for your products, then have a strategy for building a strong brand. The same is also applicable for an individual with certain changes.

**- M.KRISHNA PRASAD.**
B.E Mech, M.B.A Mktg & Sales.

# ದೀಪದುರ್ಗಾ ನಮಸ್ಕಾರ ಪೂಜೆ








ಆನಂದ ಬಳಗದ ವತಿಯಿಂದ ಪ್ರತಿವರ್ಷದಂತೆ ದೀಪ ದುರ್ಗಾ ನಮಸ್ಕಾರ ಪೂಜೆಯನ್ನು 31.7.2022ರಂದು ಸಂಜೆ ಬನ್ನೇರುಘಟ್ಟ ರಸ್ತೆಯ ಆನಂದ ಸಭಾಗೃಹದಲ್ಲಿ ನಡೆಸಲಾಯಿತು. ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ಟಿ.ಎಸ್.ನಾಗರಾಜ ಉಪಾಧ್ಯಾಯರು ಸಪತ್ನೀಕರಾಗಿ ಬಳಗದ ಪರವಾಗಿ ಪೂಜಾ ಸಂಕಲ್ಪವನ್ನು ಮಾಡಿದರು.

ಪ್ರಾರ್ಥನೆಯೊಂದಿಗೆ ದೀಪನಮಸ್ಕಾರ ಪೂಜೆಯು ಪಂಚವರ್ಣದ ಆಕರ್ಷಕ ಮಂಡಲದ ಮಧ್ಯದಲ್ಲಿ ಸ್ಥಾಪಿಸಿದ ಅಲಂಕೃತ ಪಂಚದೀಪ ಬೆಳಗಿಸುವುದರೊಂದಿಗೆ ಪ್ರಾರಂಭವಾಯಿತು.

ಮಹಿಳೆಯರಿಂದ ಲಕ್ಷ್ಮೀಶೋಭಾನೆ ಹಾಡು, ಮಹನೀಯರಿಂದ ವಿಷ್ಣು ಸಹಸ್ರನಾಮ ಪಠನೆ, ವೈವಿಧ್ಯಮಯ ನೈವೇದ್ಯಗಳ ಸಮರ್ಪಣೆಯೊಂದಿಗೆ ಚಂಡೆ ಶಂಖ ಜಾಗಟೆ ತಾಳಗಳ ವಾದನದೊಂದಿಗೆ ಮಹಾಮಂಗಳಾರತಿಯಾಗುವಾಗ ದೀಪದುರ್ಗೆ ಸಾಕ್ಷಾತ್ಕಾರವಾದಂತಹ ಅನುಭವ ಧನ್ಯತೆಯನ್ನು ನೀಡಿತು. ನಾಗರಾಜ ಉಪಾಧ್ಯಾಯರ ನೂತನ ಕಲ್ಪನೆಯೊಂದಿಗೆ ನಡೆದ ಅಷ್ಟಾವಧಾನ ಸೇವೆಯಲ್ಲಿ ಭರತನಾಟ್ಯ ಮನಸೆಳೆಯಿತು. ಬ್ರಹ್ಮಾರ್ಪಣದೊಂದಿಗೆ ಮುಕ್ತಾಯಗೊಂಡ ದೀಪದುರ್ಗಾ ನಮಸ್ಕಾರ ಪೂಜೆಯು ಬಳಗದ ಅಧ್ಯಕ್ಷರಾದ ಶ್ರೀ ಬಾಳೆಕುದ್ರು ರಾಮಚಂದ್ರ ಉಪಾಧ್ಯರು ಮತ್ತು ವಿವಿಧ ವಿಭಾಗಗಳ ಸಂಚಾಲಕರು, ಪದಾಧಿಕಾರಿಗಳು ಮತ್ತು ಸದಸ್ಯ ಬಂಧುಗಳ ಅನನ್ಯ ಪಾಲ್ಗೊಳ್ಳುವಿಕೆಯೊಂದಿಗೆ ಸಂಪನ್ನಗೊಂಡ ಬಳಿಕ ಪಾಕಶಾಸ್ತ್ರಜ್ಞ ಶ್ರೀ ವೆಂಕಟರಾಜ ಭಟ್ಟರು ಸಿದ್ಧ ಪಡಿಸಿದ ಷಡ್ರಸೋಪೇತ ಭೋಜನವನ್ನು ಸರ್ವರಿಗೂ ಉಣಬಡಿಸಲಾಯಿತು.

ಈ ಕಾರ್ಯಕ್ರಮದಲ್ಲಿ ನೂರಾರು ಭಕ್ತಬಂಧುಗಳು ಭಾಗವಹಿಸಿ ಕೃತಕೃತ್ಯರಾದರು. ವಿವಿಧ ಸೇವೆಗಳನ್ನು ಸಲ್ಲಿಸಿದವರಿಗೆ ವಿಶೇಷ ಪ್ರಸಾದ ವಿತರಿಸಲಾಯಿತು.




## ಆನಂದ ಬಳಗದ ಸದಸ್ಯರಾಗಲು ಆಹ್ವಾನ

ಆನಂದ ಬಳಗ ಈಗಾಗಲೇ 2000 ಕ್ಕಿಂತಲೂ ಹೆಚ್ಚು ಸದಸ್ಯರನ್ನು ಹೊಂದಿದ್ದು, ವರ್ಷವಿಡೀ ನಡೆಯುವ ವಿವಿಧ ಕಾರ್ಯಚಟುವಟಿಕೆಗಳ ಮೂಲಕ ಸದಸ್ಯರಿಗೆ ಅತ್ಯಂತ ಪ್ರಿಯವಾಗುತ್ತಿದೆ. ಬಳಗದ ಸದಸ್ಯರು ತಮಗೆ ಪರಿಚಯವಿರುವ ನಮ್ಮ ಸಮಾಜಕ್ಕೆ ಸೇರಿರುವ ಸ್ನೇಹಿತರು, ಬಂಧು–ಬಳಗದವರನ್ನು ಬಳಗದ ಸದಸ್ಯರಾಗಲು ಪ್ರೇರೇಪಿಸಿ, ಬಳಗದ ಸದಸ್ಯ ಶಕ್ತಿಯನ್ನು ಹೆಚ್ಚಿಸಬೇಕಾಗಿ ವಿನಂತಿ.

ಬಳಗದ ಜಾಲತಾಣ www.anandabalaga.org ಯಲ್ಲಿ ಸದಸ್ಯತ್ವ ನೋಂದಣಿಯ ಅರ್ಜಿ ನಮೂನೆಗಳು ಲಭ್ಯವಿದ್ದು, Introduction Formನ್ನು ಸದಸ್ಯರು ತುಂಬಬೇಕು ಹಾಗೂ ಸದಸ್ಯತ್ವ ಅರ್ಜಿಯನ್ನು ಆಸಕ್ತರು ತುಂಬಿ ನಿಗದಿಪಡಿಸಿದ ಅರ್ಜಿ ಶುಲ್ಕದೊಂದಿಗೆ ಬಳಗದ ಕಚೇರಿಗೆ ಸಲ್ಲಿಸಲು ಕೋರಲಾಗಿದೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : **ಶ್ರೀ ಎಂ. ಕೃಷ್ಣ ಪ್ರಸಾದ್**
ಸಂಚಾಲಕರು, ಸದಸ್ಯತ್ವ ಅಭಿವೃದ್ಧಿ ವಿಭಾಗ. (ದೂರವಾಣಿ : 9845018183)

# ಮಕ್ಕಳ ಪ್ರತಿಭಾ ಮೇಳ ಮತ್ತು ಪ್ರತಿಭಾ ಪುರಸ್ಕಾರ

ಬಹುಶಃ ಕೊರೋನಾ ಆತಂಕ ಶುರುವಾದ ಬಳಿಕ ಇದೇ ಪ್ರಥಮ ಬಾರಿಗೆ ಆನಂದ ಬಳಗದ ಸದಸ್ಯ ಬಂಧುಗಳ ಮಕ್ಕಳು ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಮತ್ತು ಪುರಸ್ಕಾರ ಸ್ವೀಕಾರಕ್ಕೆ ಒಟ್ಟು ಸೇರಿರುವುದು. ಎರಡು ವರ್ಷಗಳ ಅಂತರದ ನಂತರ ಆನಂದ ಬಳಗದ ಸಾಂಸ್ಕೃತಿಕ ವಿಭಾಗದ ಆಯೋಜನೆಯಲ್ಲಿ ಎಡಿಎ ರಂಗಮಂದಿರದಲ್ಲಿ ಪ್ರತಿಭಾ ಮೇಳ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು 24–9–2022 ಶನಿವಾರ ಸಂಪನ್ನಗೊಂಡಿತು.

ಇಡೀ ಸಭಾಂಗಣವನ್ನು ಆವರಿಸಿದ ಚಿಣ್ಣರ ಕಲರವ, ಈ ಚಿಲಿಪಿಲಿಯ ಇಂಪನ್ನು ಆಸ್ವಾದಿಸಿ ಆನಂದಿಸಿದ ಮಕ್ಕಳ ಪೋಷಕರು, ಗಣ್ಯರು, ಸದಸ್ಯ ಬಂಧುಗಳು ತಾವೇ ಭಾಗವಹಿಸಿದಂತೆ ಸಂಭ್ರಮಿಸಿದ್ದು ಕಂಡು ಆಯೋಜಕರಲ್ಲಿ ಧನ್ಯತಾ ಭಾವ.

ಕಾರ್ಯಕ್ರಮದ ಪ್ರಾರಂಭದಲ್ಲಿ ಅತಿಥಿ ಅಭ್ಯಾಗತರನ್ನು ಪುಟಾಣಿ ಮಕ್ಕಳು ಕೈಹಿಡಿದು ವೇದಿಕೆಗೆ ಕರೆತಂದಾಗ ಸಭಾಂಗಣದಲ್ಲಿ ಚಪ್ಪಾಳೆಗಳ ಸುರಿಮಳೆ. ಕಾರ್ಯಕ್ರಮದ ನಿರೂಪಣೆಯೂ ಮಕ್ಕಳಿಂದಲೇ.

ಸಾಂಪ್ರದಾಯಿಕ ಕಚ್ಚೆಪಂಚೆಯಲ್ಲಿ ಹಾಜರಾದ ಮಕ್ಕಳು ಸಂಸ್ಕೃತ ಶ್ಲೋಕದೊಂದಿಗೆ ಮಾಡಿದ ಸ್ಪಷ್ಟ ಉಚ್ಚಾರಣೆಯ ಪ್ರಾರ್ಥನೆ ಕಾರ್ಯಕ್ರಮದ ಯಶಸ್ಸಿಗೆ ಹಾಕಿದ ಬೀಜಮಂತ್ರದಂತೆ ಅನುರಣನಗೊಂಡು ಸಭೆಯ ಮೆಚ್ಚುಗೆಯನ್ನು ಗಳಿಸಿತು.

ಅತಿಥಿಗಣ್ಯರಿಗೆ ಪುಷ್ಪಗುಚ್ಛ ನೀಡಿ ಔಪಚಾರಿಕವಾಗಿ ಸ್ವಾಗತಿಸಲಾಯಿತು. ಯುವಪೀಳಿಗೆಗೆ ಪ್ರೇರಣೆ ನೀಡಲಿಕ್ಕಾಗಿಯೇ ಆಗಮಿಸಿದರೋ ಎಂಬಂತೆ ದಿವ್ಯಸಾನ್ನಿಧ್ಯ ವಹಿಸಿದ್ದ ರಾಮಕೃಷ್ಣ ಮಠ, ಬಸವನಗುಡಿಯ ತದ್ಯುಕ್ತಾನಂದ ಮಹಾರಾಜ ಜೀ ಅವರು ಮಕ್ಕಳಲ್ಲಿ ಗೋತ್ರ ಪ್ರವರ ಕೇಳಿ ಅಭಿವಾದನ ಮಾಡಿಸಿದ್ದು, ಇದಕ್ಕೆ ಸ್ಪಂದಿಸಿ ಮಕ್ಕಳು ನಿರ್ಭೀತಿಯಿಂದ ಗೋತ್ರಾಭಿವಂದನ ಮಾಡಿದ್ದನ್ನು ಸ್ವಾಮೀಜಿ ಶ್ಲಾಘಿಸಿದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳು ಸ್ವಾಮೀಜಿಯವರ ಕೈಯಿಂದ ಬಹುಮಾನ ಸ್ವೀಕರಿಸಿ ಪಾದಾಭಿವಂದನೆ ಮಾಡುವ ಸಂಸ್ಕಾರವನ್ನು ಕಂಡು ಸನಾತನ ಧರ್ಮಪರಂಪರೆಯನ್ನು ಉಳಿಸಿ–ಬೆಳೆಸುತ್ತಿರುವ ಮಧ್ವಪರಂಪರೆಯ ಆನಂದ ಬಳಗದ ಪ್ರತಿಯೊಬ್ಬರೂ





ವಜ್ರಸದೃಶರು ಎಂದು ಸ್ವಾಮೀಜಿ ಹೇಳಿದಾಗ ಸಭಿಕರ ಮನದಲ್ಲಿ ಧನ್ಯತಾ ಭಾವ.

10 ಮತ್ತು 12ನೇ ತರಗತಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಭೀಮಾ ಫೌಂಡೇಶನ್ನಿಂದ ನಗದು ಪುರಸ್ಕಾರ ಮತ್ತು ಪ್ರಮಾಣಪತ್ರವನ್ನು ಭೀಮಾಪ್ರತಿಷ್ಠಾನದ ಶ್ರೀ ವಿಷ್ಣುಶರಣ್ ಮತ್ತು ಇತರ ಗಣ್ಯರು ವಿತರಿಸಿದರು.

ಶ್ರೀ ಸ್ವಾಮೀಜಿಯವರು ತಮ್ಮ ಆಶೀರ್ವಚನದಲ್ಲಿ ಶ್ರದ್ಧೆ ಮತ್ತು ಆನಂದದ ವಿಷಯಕ್ಕೆ ನಚೀಕೇತನ ಉದಾಹರಣೆಯೊಂದಿಗೆ ಕನ್ನಡ, ಹಿಂದಿ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳ ಉಲ್ಲೇಖಗಳೊಂದಿಗೆ ಬಹು ಮಾರ್ಮಿಕವಾಗಿ ವಿವರಿಸಿದರು.

ಅಧ್ಯಕ್ಷರದ ಶ್ರೀ ಬಾಳೆಕುದ್ರು ರಾಮಚಂದ್ರ ಉಪಾಧ್ಯರು ಮತನಾಡುತ್ತಾ ಸುಮಾರು ಮೂರು ತಿಂಗಳುಗಳಿಂದ ಈ ಕಾರ್ಯಕ್ರಮದ ಬಗ್ಗೆ ನಡೆದಿದ್ದ ತಯಾರಿ, ಅಗತ್ಯ ಸಂದರ್ಭಗಳಲ್ಲಿ ನೀಡಿದ ಸಲಹೆ, ಮಾರ್ಗದರ್ಶನ, ವಿವಿಧ ಸಮಿತಿಗಳಿಗೆ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಲು







ನೀಡಿರುವ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದು, ಸಮಿತಿಗಳ ಪದಾಧಿಕಾರಿಗಳು ಮತ್ತು ಸದಸ್ಯರು ಅತ್ಯಂತ ಅಚ್ಚುಕಟ್ಟಾಗಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುತ್ತಿರುವ ಬಗೆಯನ್ನು ಚುಟುಕಾಗಿ ವಿವರಿಸಿ ಪ್ರತಿಭಾ ಮೇಳದಲ್ಲಿ ಭಾಗವಹಿಸಿರುವ ಎಲ್ಲ ಪುಟಾಣಿಗಳಿಗೆ ಶುಭಹಾರೈಸಿದರು.

ಬಳಗದ ಕಾರ್ಯದರ್ಶಿ ಶ್ರೀ ಎ. ಸಂದೀಪ್ ರಾವ್ ಅವರು ಹಿನ್ನಲೆಯಲ್ಲಿದ್ದುಕೊಂಡು ಇಡೀ ಕಾರ್ಯಕ್ರಮವನ್ನು ಪೂರ್ವನಿರ್ಧಾರದಂತೆ ನಡೆಸಿಕೊಂಡು ಹೋದ ರೀತಿ ಪ್ರಬುದ್ಧ ನಿರ್ವಹಣೆಯ ನಿದರ್ಶನ.

ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಿದ ಸಾಂಸ್ಕೃತಿಕ ವಿಭಾಗದ ಸಂಚಾಲಕಿ ಶ್ರೀಮತಿ ಶೋಭಾ ರಾಧಾಕೃಷ್ಣ ಅವರು ಎಲ್ಲೆಡೆ ಓಡಾಡುತ್ತಾ ಕಾರ್ಯಕ್ರಮದಲ್ಲಿ ಲೋಪದೋಷಗಳು ಉದ್ಭವಿಸದಂತೆ ಮುತುವರ್ಜಿಯಿಂದ ಶ್ರಮಿಸಿದ್ದು ಉಲ್ಲೇಖನೀಯ.

ಸಭಾಕಾರ್ಯಕ್ರಮದ ಬಳಿಕ ಪ್ರತಿಭಾ ಮೇಳದ ಸಮಯ ಬಂತು. ಅಷ್ಟು ಹೊತ್ತೂ ಮೇಕಪ್ ಮಾಡಿ ಕುಳಿತುಕೊಂಡಿದ್ದ ಪುಟಾಣಿಗಳ ಮುಖದಲ್ಲಿ ಚೈತನ್ಯದ ಚಿಲುಮೆ ಕಟ್ಟೆಯೊಡೆಯಿತು. ಅಷ್ಟೂ ದಿನಗಳ ಕಾಲ ತಾವು ಕಲಿತಿದ್ದನ್ನು ಪ್ರದರ್ಶಿಸುವ ತುಡಿತ. ಕೋತಿಬುದ್ಧಿಯ ಮಕ್ಕಳನ್ನು ಮೇಕಪ್ ಮಾಡಿ ಹಿಡಿದಿಟ್ಟುಕೊಳ್ಳುವಲ್ಲಿ ಹೈರಾಣಾದ ಪೋಷಕರು ಮತ್ತು ತರಬೇತುದಾರರು.

ರತನ್ ಟಾಟಾ ಬಗ್ಗೆ ಏಕಪಾತ್ರಾಭಿನಯ, ಪೇಜಾವರ ಶ್ರೀಗಳೇ ಬಂದರೋ ಎಂಬಂತಿದ್ದ ಗುರುಗಳಿಂದ ಮಂತ್ರಾಕ್ಷತೆ, ಪಂಚಭೂತದ ಪರಿಕಲ್ಪನೆ, ವಿವಿಧ ರೀತಿಯ ಸಂಕೀರ್ಣ ವರ್ಣ ಬೆಳಕಿನ ಸಂಯೋಜನೆ, ಮಾಯಾಲೋಕದ ಸೃಷ್ಟಿ. ಮಕ್ಕಳಲ್ಲಿ ಪ್ರತಿಭೆಯನ್ನು ಹುಡುಕಿ ಹೊರತೆಗೆದ ಅಲಂಕೃತ, ಅಂಕಿತ, ಸೌಜನ್ಯ, ಪರಿಕಲ್ಪನೆ ನೀಡಿದ ಸೌಮ್ಯ ಕೊಡಿಪ್ಪಾಡಿ, ಮಾಧವಿ ಬಲ್ಲಾಳ್, ತಾಂತ್ರಿಕ ಪರಿಣತರಾದ ರಂಜಿತ್ ರಾಜೇಶ, ಹಿರಿಯ ಅನುಭವಿಗಳಾದ ರಮೇಶ್ ಭಟ್ ಮತ್ತು ಇತರರು, ಡಾ.ವೀಣಾ ಶರತ್ ಅವರಿಂದ ನಿರೂಪಣೆಯ ತರಬೇತಿ. ಇನ್ನನೇಕ ಅನುಭವೀ ಸ್ವಯಂಸೇವಕರಿಂದ ತೆರೆಮರೆಯ ಸಹಕಾರ ಪ್ರಶಂಸನೀಯ.

ಬಳಗದ ವಿವಿಧ ವಿಭಾಗಗಳ ಸಂಚಾಲಕರು ಮತತಿ ಕಾರ್ಯಕಾರಿ ಸಮಿತಿ ಸದಸ್ಯರು ತೋರಿದ ಸಹಾಯ, ಕಿಕ್ಕಿರಿದ ಬಳಗದ ಹಿರಿಕಿರಿಯ ಸದಸ್ಯರ ಚಪ್ಪಾಳೆಯ ಪ್ರೋತ್ಸಾಹ, ರಂಗಮಂದಿರದ ಮೈಕ್ ಲೈಟ್ ಸಿಬ್ಬಂದಿಗಳ ಸಾಮಯಿಕ ಸಹಕಾರ, ಶ್ರೀ ಭಾಸ್ಕರ ಭಟ್ಟರಿಂದ ರುಚಿಕಟ್ಟಾದ ಉಪಾಹಾರ, ಗಣೇಶ್ ಮೆಟಲ್ ಮಾರ್ಟ್‌ನ ಶ್ರೀ ಭಾಸ್ಕರರಾವ್ ಮತ್ತು ಜಯನಗರದ ಕೇಕ್‌ವಾಲದ ಶ್ರೀ ಜಗದೀಶ್ ಅವರಿಂದ ಪುರಸ್ಕೃತ ಪ್ರತಿಭೆಗಳಿಗೆ ವಿಶೇಷ ಉಡುಗೊರೆ. ಹಲವಾರು ಉದಾರಿ ಸದಸ್ಯರು ಪೈಪೋಟಿಗೆ ಬಿದ್ದಂತೆ ನೀಡಿದ ಧನಸಹಾಯ ಇವೆಲ್ಲವೂ ಮೇಳೈಸಿ ಕಾರ್ಯಕ್ರಮದ ರೂವಾರಿ ಶ್ರೀಮತಿ ಶೋಭಾರಾಧಾಕೃಷ್ಣರ ಮುಖದಲ್ಲಿ ಯಶಸ್ಸಿನ ಮಿಂಚು. ಆನಂದ ಬಳಗದ ಸದಸ್ಯರೆಲ್ಲರ ಮೊಗದಲ್ಲಿ ಆನಂದ ಭಾಷ್ಪ. ಕಾಲಕಾಲಕ್ಕೆ ವಿಭಿನ್ನ ರೀತಿಯಲ್ಲಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ವಿನ್ಯಾಸ ಮಾಡಿ ಸದಸ್ಯರಿಗೆ ಬಳಗದ ಗ್ರೂಪಿನಲ್ಲಿ ನೆನಪಿಸುತ್ತಿದ್ದ ಶ್ರೀ ಬಾಲಚಂದ್ರ ತೋಳ್ಪಾಡಿಯವರ ಶ್ರಮ, ಇವೆಲ್ಲವನ್ನೂ ತಮ್ಮಮೂರನೇ ಕಣ್ಣಿನಿಂದ ದಾಖಲಿಸುತ್ತಿದ್ದ ಶ್ರೀ ಮಟ್ಟಿ ರಾಮಚಂದ್ರ ರಾಯರಿಗೆ ಅಭಿನಂದನಾ ಹೂಗುಚ್ಛ ಕೊಡುವ ವೇಳೆ ಅದನ್ನು ಕ್ಯಾಮರಾದಲ್ಲಿ ದಾಖಲಿಸಿದ ಹಿರಿಯ ಸದಸ್ಯ ಶ್ರೀ ಬಾಲಕೃಷ್ಣ ಉಪಾಧ್ಯಾಯರು, ಇಡೀ ಕಾರ್ಯಕ್ರಮವನ್ನು ವಿಡೀಯೋ ಮಾಡಿದ ಶ್ರೀ ಮುರಳಿಯವರು ಕಾರ್ಯಕ್ರಮದ ಯಶಸ್ಸಿನಲ್ಲಿ ಇವೆಲ್ಲವೂ ಉಲ್ಲೇಖನೀಯ ಅಂಶಗಳೇ.








# ದೇವರಿಗೆ ತಲುಪಿದ್ದು ಎರಡು ಮಾತ್ರ

## (ವೈಕುಂಠವಾಸಿ ಶ್ರೀವಿಶ್ವೇಶ ತೀರ್ಥಶ್ರೀಗಳ ಪ್ರವಚನದಿಂದ)



ಜಮೀನ್ದಾರರ ತೋಟದಲ್ಲಿ ಬಾಳೆಯ ಫಸಲು ಬಂದಿತ್ತು. ಪ್ರತಿವರ್ಷ ಫಸಲು ಬಂದಾಗ ಮೊದಲು ಊರ ದೇವರಿಗೆ ನೈವೇದ್ಯ ಮಾಡಿಸುವುದು ಜಮೀನುದಾರರ ವಾಡಿಕೆ. ಈ ಬಾರಿಯೂ ದೇವರಿಗೆ ಸಮರ್ಪಿಸಲು ಒಂದು ಬಾಳೆಯ ಗೊನೆ ತೆಗೆದಿರಿಸಿದರು. ತೋಟದಲ್ಲಿ ಕೆಲಸ ಮಾಡುವ ಬಾಲಕನೊಬ್ಬನ ಕೈಯಲ್ಲಿ ಆ ಗೊನೆಯನ್ನು ಕೊಟ್ಟು ದೇವಸ್ಥಾನದ ಅರ್ಚಕರಿಗೆ ಕೊಡಲು ಹೇಳಿಕಳುಹಿಸಿದರು.

ಆ ಹುಡುಗ ಬಾಳೆಯ ಗೊನೆ ಹೊತ್ತು ದೇವಸ್ಥಾನದತ್ತ ಹೊರಟ. ಮಧ್ಯಾಹ್ನದ ವೇಳೆ, ಬಾರೀ ಬಿಸಿಲು. ಹುಡುಗನಿಗೆ ಹಸಿವು. ದೇವರಿಗಾಗಿ ನೀಡಿದ್ದ ಆ ಗೊನೆಯ ಬಾಳೆಹಣ್ಣುಗಳು ಚೆನ್ನಾಗಿ ಪಕ್ವವಾಗಿದ್ದವು. ಸುವಾಸನೆ ಹುಡುಗನ ಮೂಗಿಗೆ ಬಡಿಯುತ್ತಿತ್ತು.

ಮೊದಲೇ ಹಸಿವಿನಿಂದ ಕಂಗಾಲಾಗಿದ್ದ ಹುಡುಗನಿಗೆ ತಡೆಯಲಾಗಲಿಲ್ಲ. ಗೊನೆ ಕೆಳಗಿಳಿಸಿದ. ನಡುವಿನ ಎರಡು ಹಣ್ಣುಗಳನ್ನು ಕಿತ್ತ. ಹಿಂದೆ ಮುಂದೆ ನೋಡದೆ ಸಿಪ್ಪೆಸುಲಿದು ತಿಂದೇ ಬಿಟ್ಟ. ಅವನ ಹಸಿವು ಹಿಂಗಿತು.

ಪುನಃ ಗೊನೆಯನ್ನು ಹೊತ್ತುಕೊಂಡು ದೇವಸ್ಥಾನಕ್ಕೆ ತೆರಳಿದ. ಅರ್ಚಕರಿಗೆ ಬಾಳೆಗೊನೆಯನ್ನು ಕೊಟ್ಟ. ಅರ್ಚಕರು ದೇವರ ಸಮರ್ಪಣೆಗೆ ಜಮೀನ್ದಾರರು ಕಳುಹಿಸಿದ ಬಾಳೆಗೊನೆ ನೋಡಿದರು. ನಡುವಿನ ಎರಡು ಹಣ್ಣು ಕಿತ್ತಿರುವುದು ಅವರ ಕಣ್ಣಿಗೆ ಬಿತ್ತು. ಹುಡುಗನನ್ನು ಗದರಿಸಿ ಕೇಳಿದರು. ಆ ಹುಡುಗ ತಾನು ಕಿತ್ತು ತಿಂದಿರುವುದಾಗಿ ಒಪ್ಪಿಕೊಂಡ. ಅರ್ಚಕರು ಅವನನ್ನು ಚೆನ್ನಾಗಿ ಬೈದರು. ದೇವರ ಸಮರ್ಪಣೆಗೆ ಕೊಟ್ಟದ್ದನ್ನು ಕದ್ದು ತಿಂದದ್ದು ಮಹಾಪರಾಧ, ಅಷ್ಟೂ ತಿಳಿಯಲಾರದೇ? ಎಂದೆಲ್ಲ ಆ ಬಾಲಕನಿಗೆ ಬೆವರಿಳಿಸಿ ಕಳುಹಿಸಿದರು.

ಅರ್ಚಕರು ಉಳಿದ ಬಾಳೆಯ ಗೊನೆಯ ಹಣ್ಣುಗಳನ್ನು ಅಂದಿನ ಪೂಜೆಯಲ್ಲಿ ದೇವರಿಗೆ ನೈವೇದ್ಯವಾಗಿ ಸಮರ್ಪಿಸಿದರು.

ಆ ದಿನ ರಾತ್ರಿ ಜಮೀನುದಾರರ ಕನಸಿನಲ್ಲಿ ದೇವರು ಕಾಣಿಸಿಕೊಂಡರು. ಕಳುಹಿಸಿದ ಬಾಳೆಯ ಗೊನೆಯಲ್ಲಿ ಎರಡು ಹಣ್ಣುಗಳು ಮಾತ್ರ ತನಗೆ ತಲುಪಿರುವುದಾಗಿ ದೇವರು ಹೇಳಿ ಮಾಯವಾದರು. ಜಮೀನುದಾರರಿಗೆ ಬಹಳ ಅಚ್ಚರಿ. ಮರುದಿನ ಅರ್ಚಕರನ್ನು ಕಂಡು ವಿಚಾರಿಸಿದರು. ನಡೆದ ಘಟನೆಯನ್ನೆಲ್ಲ ಕೇಳಿ ತಿಳಿದಾಗಲೇ ಅವರಿಗೆ ಅರಿವಾದದ್ದು– ಆ ಹಸಿದ ಪುಟ್ಟ ಬಾಲಕ ತಿಂದ ಎರಡು ಹಣ್ಣುಗಳು ಮಾತ್ರ ದೇವರಿಗೆ ನೇರ ತಲುಪಿದ್ದವು.


ಹಸಿದವರ ಹೊಟ್ಟೆಯಲ್ಲಿ ದೇವರಿರುವನಲ್ಲವೆ? ಆದ್ದರಿಂದ ನಮ್ಮ ದಾನ ಆವಶ್ಯಕತೆ ಇರುವವರಿಗಾಗಿ ಮೀಸಲಿರಬೇಕು.

**– (ನಾರಾಯಣ ಭಟ್ ಟಿ. ವಿಶ್ವಕಥಾಕುಂಜದಿಂದ)**

## ಭಾವಪೂರ್ಣ ಶ್ರದ್ಧಾಂಜಲಿ



* **ಶ್ರೀ ಮೋಹನ ಕಲ್ಲೂರಾಯರು** ಕಾಶಿಗೆ ಆತ್ಮೀಯರೊಂದಿಗೆ ಪಾದಯಾತ್ರೆ ಮಾಡುತ್ತಿದ್ದ ದಾರಿಯಲ್ಲಿ ಹೈದರಾಬಾದ್ ಸಮೀಪದಲ್ಲಿ ಹೃದಯಾಘಾತದಿಂದ ನಿಧನಹೊಂದಿದರು. ಅಗಲಿದ ಆತ್ಮಕ್ಕೆ ಸದ್ಗತಿ ದೊರೆಯಲೆಂದು ಭಗವಂತನಲ್ಲಿ ಆನಂದ ಬಳಗವು ಪ್ರಾರ್ಥಿಸುತ್ತದೆ.



* ಚಿಂತಕ, ವಾಗ್ಮಿ, ಪತ್ರಕರ್ತ, ಲೇಖಕ, ಸಂಘಟಕ, ಸಹೃದಯಿ, **ಉದಯ ಧರ್ಮಸ್ಥಳ** ಅವರು 19.8.2022ರಂದು ನಿಧನ ಹೊಂದಿದರು. ಅಗಲಿದ ಆತ್ಮಕ್ಕೆ ಸದ್ಗತಿ ದೊರೆಯಲೆಂದು ಭಗವಂತನಲ್ಲಿ ಆನಂದ ಬಳಗವು ಪ್ರಾರ್ಥಿಸುತ್ತದೆ.

# FRIDGE HOUSE

## Wholesaler & Importers

**M/s Emerson Commercial & Residential Solutions**

**Dealers: M/s. Daikin Air Conditioning India Pvt Ltd**
(Spare Parts for Air Conditioner)

**M/s. Gujarat Flurochemicals Ltd.**



Scroll



Sealed



Semi Hermetic



Scroll Condensing Unit



Dixell Controls



Tie



Fan & Motor



Split AC



Copper pipes & Insulation Materials

**EQUIPMENTS & COMPONENTS. for**

***HVAC & R, *COLD ROOMS, *RIPENING CHAMBERS, *HEAT PUMPS.**

Adithya Tower # 23, V.S.N Road, Shivaji Nagar, Bengaluru - 560 051.
Ph. No. 080-22861936, 22860260 & 41238022
Email : info@fridgehouse.net ; Web Site: www. fridgehouse.net
Contact Persons : M.K. Prasad & Nagesh D Prabhu - M: 9845217197

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ


**HOTEL AJANTHA GROUP OF HOSPITALITY SERVICES**

# HOTEL AJANTHA

A Boarding and Lodging Hotel of repute with spacious place for parking
Party Halls and all facilities











No.22/A, Mahatma Gandhi Road, Bangalore - 560 001
Phone : 25584321 Fax : 080 - 2558 4780 | Email : bagilthaya@vsnl.com

# AJANTHA TRINITY INN

**Luxurious Rooms for Comfortable Stay**









## Our Facilities

- Single Bed
- Double Bed
- Air Conditioner
- Hot Water
- Mineral Water
- Free Wifi

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

Trinity Circle, Mahatma Gandhi Road, Bangalore - 560 001
Phone : 25559491 - 5 Lines

*With best compliments*

# FIRETECH

## BOILERS PRIVATE LTD.

(An ISO 9001 : 2015 Certified Company)

**Office:** "FIRETECH HOUSE" , No. 211, 2nd Cross, 38th Main, B.T.M Layout, 2nd Stage, Bangalore - 560 068, Karnataka. Ph.: 080-26683686 / 26683921, Mob. : 73384 87934

**Works:** 121/C2,Bommasandra Industrial Area, Anekal Taluk, Bangalore - 560 099, Karnataka. Ph.: 080-27834189

E-mail : firetechhouse@gmail.com

Website : www.firetechboilers.com

## *Manufacturing Steam Boilers (IBR & Non IBR)*

- Thermic Fluid Heaters
- Hot Air Generators
- Waste Heat Boilers
- Agro Dryers





- Heat Exchanger
- MDC
- Accumulator etc.,






ನಿಮ್ಮ
ಯಾವುದೇ ಉದ್ಯಮಕ್ಕೆ
ನಮ್ಮ ಪ್ರೋತ್ಸಾಹ
ನಿರಂತರ
ಕೆಬಿಎಲ್
ಎಂಎಸ್‌ಎಂಇ
ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ
ಉದ್ಯಮಿಗಳಿಗೆ ಹಣಕಾಸು ಸೌಲಭ್ಯ
ತಾತ್ವಿಕವಾಗಿ ತ್ವರಿತ ಮಂಜೂರಾತಿ
ಗ್ರಾಹಕರ ರಿಯಲ್ ಟೈಮ್ ದೃಢೀಕರಣ
ಅಡಚಣೆ ರಹಿತ ದಾಖಲಾತಿ ಪ್ರಕ್ರಿಯೆ
ನಮ್ಮ ಗ್ರಾಹಕರಿಗೆ
ಡಿಜಿಟಲ್ ಸಾಲ
ಅನುಭವದ ಸಬಲೀಕರಣ
ಸ್ವಯಂಚಾಲಿತ ಸಾಲ ಮೌಲ್ಯಮಾಪನ & ಅರ್ಹತೆ
ಆಕರ್ಷಕ ಬಡ್ಡಿ ದರಗಳು
ಸರಳೀಕೃತ ಪ್ರಕ್ರಿಯೆ
ಹೆಚ್ಚಿನ ವಿವರಗಳಿಗೆ ಟೋಲ್ ಫ್ರೀ ನಂ. 1800 425 1444 ಕರೆ ಮಾಡಿ ಅಥವಾ ಸಮೀಪದ ನಮ್ಮ ಶಾಖೆಗೆ ಭೇಟಿ ಕೊಡಿ
*ಷರತ್ತುಗಳು ಅನ್ವಯ
Follow us on : / KarnatakaBank
ಕರ್ಣಾಟಕ ಬ್ಯಾಂಕ್
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
CIN: L85110KA1924PLC001128
ಇಮೇಲ್: info@ktkbank.com
ವೆಬ್‌ಸೈಟ್: www.karnatakabank.com

*Best Compliments from*

# Hotel Dwaraka

Anand Rao Circle, Bangalore - 560 009

## Late N.R. Narayana Rao

Managing Partner




# ವಸತಿ ಗೃಹ


ನಮ್ಮ ವಿಶೇಷತೆಗಳು

ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ,
ಬೆಳಕಿರುವ, ನಿರಂತರ ನೀರು ವಿದ್ಯುತ್ ಸರಬರಾಜಿರುವ,
ಅತಿ ಹೆಚ್ಚಿಲ್ಲದ ಬಾಡಿಗೆಯಿರುವ, ವಿಶಾಲವಾದ ಕೊಠಡಿಗಳು,
ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ.
ಮತ್ತು ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ

ದೂರವಾಣಿ : 22265011 (8 ಮಾರ್ಗಗಳು),
22268263, 22268264



# Sri Krishna Sevashrama Hospital



No. 523, 10th Main, 45th Cross, 5th Block, Jayanagar, Bengaluru - 560 041.

**Most popular neighborhood hospital located in South Bangalore with 75 beds offering quality medical care at affordable cost.**

## Specalities

- General Medecine
- General Surgery
- Obsterics & Gynaecology
- Paediatrics
- Orthopaedics & Trauma
- Diabetes & Endocrinology
- Urology
- Rheumatology
- Laparoscopic Surgery
- Ophthalmology
- Dermatology
- ENT & Head & neck Surgery
- Vascular Surgery
- Nephrology
- Neurology
- Psychiatry

## Services

- Dental Unit
- Dialysis Unit
- Laboratory Services
- X-Ray & Ultrasound
- Physiotherapy
- Endoscopy
- MICU & PICU
- Home care Service
- Ayurveda
- Pharmacy

**Donations Accepted (80g Exemption)**

**Contact for more information and patient referral**

**Ph No: 080 4534 0000** **Email: sevashramahospital@gmail.com**



# Sri Vishwesha Theertha Memorial Hospital



**(A unit of Sri Krishna Sevashrama Trust)**

**NEW HEALTHCARE FACILITY**

For economically poor patients at Marathahalli Whitefield Bangalore

Construction is rapidly progressing of this 100 bedded Multispecialt offering the best in healthcare at affordable rates




Under the leadership of **H H Sri Vishwaprasanna Theertha Swamiji**, Sri Krishna Sevashrama Trust is determined to complete this dream project of Late **H H Sri Vishwesha Theertha Swamiji**

Donations are welcome from munificent donors and philanthropic organizations

For details, please contact Mr. Manjunath - +91 90358 21223

*With Best Compliments from :*

## Hotel Sheetal

#32/12, Sheshadri Road
Ananda Rao Circle
Bangalore - 560 009
Ph : 41139560 - 64 | Mobile : 98457 77381






- Food and Drink : Restaurant, Room Service
- Services : Front Door 24x7, Baggage Storage, Lift
  Full-service laundry, House keeping
- Non AC Rooms, Private Bathroom

## Sheetal Residency

#3/1, Old Sawar Lane, Sheshadri Road
Near Sangolli Rayanna Circle
Bangalore - 560 009
Ph : 080 2234 3777 / 80 / 81





- Free Breakfast
- Near Public Transport
- Great Rooms (A/C)
- Great Service
- Free Wi-Fi
- Parking Area

info@sheetalresidency.com www.sheetalresidency.com

ಎ. ಪ್ರಭಾಕರ ರಾವ್, ಮ್ಯಾನೇಜಿಂಗ್ ಪಾರ್ಟ್‌ನರ್

---

ಶುಭಾಶಯಗಳನ್ನು ಕೋರುವವರು,

॥ ಹರಿಃ ಓಂ ॥

# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು - 27, ದೂರವಾಣಿ : 22235533, 22241121

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.

ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ

(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

## ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು - 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು - 41
ದೂರವಾಣಿ : 26639321

ಶ್ರೀರಾಂಪುರ : 389, ಮಹಾಕವಿ ಕುವೆಂಪು ರಸ್ತೆ
ನಾಗಪ್ಪ ಬ್ಲಾಕ್, ಬೆಂಗಳೂರು - 21

*With Best Compliments from :*

## P.C. RAO

RISPL
Rao Ideal Services Pvt Ltd

# Rao Ideal Services Pvt Ltd

***Specialists in Staff Outsourcing and Facility Management***

